# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 491/2023

**ಸಾಕ್ಷಿಯನ್ನು ದಿಃ 02.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಬಸವೇಗೌಡ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಲೇಟ್ ಜವರೇಗೌಡ | | |
| ವಯಸ್ಸು | 50 ವರ್ಷ | | |
| ಕೆಲಸ | ಮುಖ್ಯಪೇದೆ ಹುಣಸೂರು ಪಟ್ಟಣ ಠಾಣೆ | | |
| ವಾಸಸ್ಥಳ | ಹುಣಸೂರು ಪಟ್ಟಣ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 07.07.2023 ರಿಂದ ಇಲ್ಲಿಯವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 08.07.2023 ರಂದು ಸಂಜೆ 5.00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಯಲ್ಲಿ ನನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಅದರ ಆಧಾರದ ಮೇಲೆ ಠಾಣಾ ಮೊ.ಸಂಃ 134/23ರಲ್ಲಿ ಪ್ರಕರಣ ದಾಖಲಿಸಿ ಪ್ರವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೆಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ-1ರಲ್ಲಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಾನು ಸಲ್ಲಿಸಿದ ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು, ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿಃ 10.07.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಮಹಜರಿಗಾಗಿ ಹೋದಾಗ ಯಾರು ಸಿಗಲಿಲ್ಲ. ದಿಃ 14.07.2023 ರಂದು ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಮನವಿ ಸಲ್ಲಿಸಿರುತ್ತೇನೆ. ದಿಃ 15.07.2023 ರಂದು ಪುನಃ ಕೃತ್ಯ ನಡೆದ ಸ್ಥಳಕ್ಕೆ ಭೇಟಿಕೊಟ್ಟು ಚಾಸಾ-2 ರವರು ಹಾಜರಿದ್ದು, ಸ್ಥಳ

ತೋರಿಸಿದ ಮೇರೆಗೆ ಪಂಚರಾದ ಚಾಸಾ–5 ಮತ್ತು 6 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರ ಸಮಕ್ಷಮ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಸ್ಥಳ ಮಹಜರು ಕ್ರಮ ಜರುಗಿಸಿರುತ್ತೇನೆ. ಸದರಿ ಮಹಜರು ನಿಪಿ–2ರಲ್ಲಿದ್ದು, ಸಾಕ್ಷಿ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಮಹಜರು ಸಮಯದಲ್ಲಿ ಕೃತ್ಯದ ಸಮಯದಲ್ಲಿ ಉಪಯೋಗಿಸಿದ ಕಲ್ಲನ್ನು ಚಾಸಾ–2 ರವರು ಹಾಜರುಪಡಿಸಿದ್ದು ಅದನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ–1 ರ ಕಲ್ಲನ್ನು ನೋಡಿ ಗುರುತಿಸುತ್ತಾರೆ. ನಂತರ ಠಾಣೆಗೆ ವಾಪಸ್ಸಾಗಿ ಅಮಾನತ್ತುಪಡಿಸಿಕೊಂಡ ಕಲ್ಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ–2 ರಿಂದ 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿಃ 27.02.2023 ರಂದು ಆರೋಪಿತರನ್ನು ಠಾಣೆಗೆ ಬರಮಾಡಿಕೊಂಡು ವಿಚಾರಣೆಗೆ ಒಳಪಡಿಸಿರುತ್ತೇನೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ದಿಃ 28.07.2023 ರಂದು ಹುಣಸೂರು ಸರ್ಕಾರಿ ಆಸ್ಪತ್ರೆಯಿಂದ ಚಾಸಾ–2 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. SSG ವಕೀಲರಿಂದಃ</u>**

ನಿಪಿ–1ರ ದೂರನ್ನು ಓದಿ ಪ್ರಕರಣ ದಾಖಲಿಸಿಕೊಂಡಿದ್ದೇನೆ. ದೂರು ಸಲ್ಲಿಸಲು ಸುಮಾರು 13 ಗಂಟೆಗಳ ಕಾಲ ವಿಳಂಬವಿದೆ ಎಂದರೆ ಸರಿ. ಆ ದಿನ ನಾನೇ ಠಾಣಾಧಿಕಾರಿಯಾಗಿದ್ದೆ. ನನ್ನ ಸಹಿ ಪ್ರ.ವ.ವರದಿಯಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಆಗ ತಾನೇ ಹುಣಸೂರು ಪಟ್ಟಣ ಠಾಣೆಗೆ ವರ್ಗಾವಣೆಯಾಗಿ ಬಂದಿದ್ದು, ನನ್ನ ಹೆಸರು ಐ.ಟಿಯಲ್ಲಿ

ಬದಲಾವಣೆಗೊಂಡಿರಲಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಾನೇ ದೂರನ್ನು ಸ್ವೀಕರಿಸಿ ಪ್ರಕರಣ ದಾಖಲಿಸಿ ತನಿಖೆ ನಡೆಸಿ ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನಿಪಿ–1ರ ಮೊದಲನೇ ಪುಟದ ಮೇಲಿನಿಂದ 8ನೇ ಸಾಲಿನಲ್ಲಿ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ನಿಪಿ–5ರ ಗಾಯದ ಪ್ರಮಾಣ ಪತ್ರದಲ್ಲಿ ಚಾಸಾ–2 ರವರನ್ನು ಸಿದ್ದೇಗೌಡ ಎಂಬುವವರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದಾರೆ ಎಂದು ನಮೂದಾಗಿದೆ ಎಂದರೆ ಸರಿ. ಸದರಿ ಸಿದ್ದೇಗೌಡರವರನ್ನು ನಾನು ತನಿಖೆಯ ಸಮಯದಲ್ಲಿ ವಿಚಾರಣೆ ಮಾಡಿಲ್ಲ ಮತ್ತು ಅಂತಿಮ ವರದಿಯಲ್ಲಿ ಸಾಕ್ಷಿಯಾಗಿ ಕಾಣಿಸಿಲ್ಲ ಎಂದರೆ ಸರಿ. ನನ್ನ ಅಂತಿಮ ವರದಿಯ ಪ್ರಕಾರ ಮೇಲೆ ಹೇಳಿದ ಸಿದ್ದೇಗೌಡ ಪ್ರತ್ಯಕ್ಷ ಸಾಕ್ಷಿ ಎಂದರೆ ಸರಿ. ಸದರಿ ಸಿದ್ದೇಗೌಡರವರನ್ನುವಿಚಾರಣೆಗೆ ಒಳಪಡಿಸದೇ ಇರುವ ಕಾರಣ ಚಾಸಾ–2 ರವರಿಗೆ ಹೇಗೆ ಗಾಯವಾಯಿತು ಎಂದು ಹೇಳಲು ನಾನು ಸಮರ್ಥನಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚಾಸಾ–2 ಮತ್ತು ಇನ್ನಿಬ್ಬರು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ–3 ಮತ್ತು 4 ರವರನ್ನು ವಿಚಾರಣೆಗೆ ಒಳಪಡಿಸಿದ್ದೆ ಎಂದು ನುಡಿಯುತ್ತಾರೆ. ಚಾಸಾ–3 ಮತ್ತು 4 ರವರು ತಮ್ಮ ಹೇಳಿಕೆಯಲ್ಲಿ ಘಟನೆಯ ಸಮಯದಲ್ಲಿ ಸಿದ್ದೇಗೌಡ ಹಾಜರಿದ್ದು, ಚಾಸಾ–2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಎಂದು ಹೇಳಿಲ್ಲ ಎಂದರೆ ಸರಿ. ನಿಪಿ–1ರ ದೂರಿನಲ್ಲಿ ಚಾಸಾ–2 ರವರನ್ನು ಚಾಸಾ–3 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದು ಬರೆದಿದೆ ಎಂದರೆ ಸರಿ. ನಾನು ಹೇಳಿದ ರೀತಿಯಲ್ಲಿ ಈ ಪ್ರಕರಣದ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಚಾಸಾ–2 ರಿಂದ 4 ರವರು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರು ಸ್ಕೂಟರ್ ಓಡಿಸುವಾಗ ಬಿದ್ದು ಮಾಡಿಕೊಂಡ ಗಾಯವನ್ನು ಚಾಸಾ–1 ರವರ ಮಾತು ಕೇಳಿ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಚಾಸಾ–5 ಮತ್ತು 6 ರವರು ಕೃತ್ಯ ನಡೆಯಿತು ಎನ್ನುವ ಸ್ಥಳದ ಆಜು–ಬಾಜಿನ ಅಂಗಡಿಯ ಮಾಲೀಕರಲ್ಲ ಎಂದರೆ ಸರಿ. ಹುಣಸೂರು ಪಟ್ಟಣ ಠಾಣೆಯ ವ್ಯಾಪ್ತಿಯ ಕಲ್ಕುಣಿಕೆಗೆ ಚಾಸಾ–5 ಮತ್ತು ಕರೀಗೌಡರ ಬೀದಿಗೆ ಚಾಸಾ–6 ಬಾತ್ಮಿದಾರರು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ, ಸ್ಥಳದಲ್ಲಿ ಯಾವುದೇ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ–5 ಮತ್ತು 6 ರವರನ್ನು ಠಾಣೆಗೆ ಕರೆಸಿ ಸಹಿ

ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ–2ರ ಮಹಜರಿನಲ್ಲಿ ಹಿಡಿ ಗಾತ್ರದ ಕಾಡುಜಾತಿಯ ಕಲ್ಲು ಎಂದು ಬರೆದಿದೆ ಎಂದರೆ ಸರಿ. ಮು.ಮಾ–1 ಸೈಜ್ ಕಲ್ಲಿನ ತುಂಡು ಎಂದರೆ ಸರಿಯಲ್ಲ. ಅದು ಕಾಡುಜಾತಿಯ ಕಲ್ಲು ಆಗಿದೆ. ನಾನು ಅಮಾನತ್ತುಪಡಿಸಿಕೊಂಡಿದ್ದೇನೆ ಎಂದು ಹೇಳುವ ಕಾಡುಜಾತಿಯ ಕಲ್ಲು ಮು.ಮಾ–1 ಅಲ್ಲ ಎಂದರೆ ಸರಿಯಲ್ಲ. ಮು.ಮಾ–1 ನಮ್ಮ ಠಾಣೆಯಲ್ಲಿ ಮುಗಿದು ಹೋದ ಕೇಸಿನ ಮುದ್ದೆಮಾಲು ಎಂದರೆ ಸರಿಯಲ್ಲ. 2023ನೇ ಇಸವಿಯಲ್ಲಿ ಘಟನೆ ನಡೆದಿದೆ ಎಂದು ನಿಪಿ–1ರ ದೂರನ್ನು ಸ್ವೀಕರಿಸಿದ್ದೇನೆ ಎಂದರೆ ಸರಿ. ಮು.ಮಾ–1ರಲ್ಲಿ ಪಿ.ಆರ್ 6/25 ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಅದೇ ಕಲ್ಲನ್ನು ಅಮಾನತ್ತುಪಡಿಸಿಕೊಂಡಿದೇನೆ. ದಿ:28.07.2023 ರಂದು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಅಂತಿಮ ವರದಿಯಲ್ಲಿ ನಮೂದಿಸಿದ ಕಲ್ಲಿಗೂ ಮು.ಮಾ–1 ಕ್ಕೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಮು.ಮಾ–1ರ ಮೇಲೆ PF ಸಂಖ್ಯೆ ಬರೆದಿಲ್ಲ ಎಂದರೆ ಸರಿ. ಚೀಟಿಯಲ್ಲಿ ಬರೆದಿದ್ದೇನೆ. ಮು.ಮಾ–1ನ್ನು 2023ರಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂಬ ಬಗ್ಗೆ ಯಾವುದೇ ಪುರಾವೆ ಇಲ್ಲ ಎಂದರೆ ನ್ಯಾಯಾಲಯಕ್ಕೆ ಬರುವ ಸಿಬ್ಬಂದಿಯ ಮೂಲಕ ಕಳುಹಿಸಿಕೊಡಲಾಗುತ್ತದೆ. ಮು.ಮಾ–1 ಈ ಕೇಸಿಗೆ ಸಂಬಂಧಿಸಿದ ಕಲ್ಲು ಅಲ್ಲ ಎಂದರೆ ಸರಿಯಲ್ಲ. ಮು.ಮಾ–1ರ ಕಲ್ಲಿನಿಂದ ಆರೋಪಿತರು ಚಾಸಾ–2 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–2ರಲ್ಲಿರುವ ಕಚ್ಚಾ ನಕಾಶೆಯನ್ನು ನಾನೇ ತಯಾರಿಸಿರುತ್ತೇನೆ. ಸದರಿ ನಕ್ಷೆಯನ್ನು ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ–5 ಮತ್ತು 6 ರವರಿಗೆ ಮಹಜರು ಸಾಕ್ಷಿದಾರರಾಗಿ ಬರಬೇಕು ಎಂದು ನೋಟೀಸ್ ಕೊಟ್ಟಿಲ್ಲ. ನಾನು ಮಹಜರು ಮಾಡಿದ್ದೇನೆ ಎನ್ನುವ ಕಲ್ಕುಣಿಕೆ ಸರ್ಕಲ್ ಯಾವಾಗಲೂ ಜನಜಂಗುಳಿಯಿಂದ ಕೂಡಿರುವ ಸರ್ಕಲ್ ಎಂದರೆ ಸರಿ. ಅಂತಿಮ ವರದಿಯೊಂದಿಗೆ ಆಸ್ಪತ್ರೆಗೆ ಕೊಟ್ಟಿದ್ದೇನೆ ಎನ್ನುವ ವರದಿ ಇಲ್ಲ ಎಂದರೆ ಸರಿ. ಆರೋಪಿತರು ಚಾಸಾ–2 ರವರಿಗೆ ಹಲ್ಲೆ ಮಾಡದೇ ಇರುವ ಕಾರಣ ನಾನು ವೈದ್ಯರಿಗೆ ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಚಾಸಾ–2 ರವರಿಗೆ ರಕ್ತಗಾಯಗಳು ಆಗಿರಲಿಲ್ಲ. ತಲೆಗೆ ಗಾಯವಾಗಿತ್ತು. ಚಾಸಾ–2 ರವರ ಬಟ್ಟೆಯ ಮೇಲೆ ರಕ್ತ ಸೋರಿರಲಿಲ್ಲ. ಚಾಸಾ–7 ರವರು ಚಾಸಾ–2 ರವರಿಗೆ ತಲೆಗೆ ಗಾಯವಾಗಿದೆ ಎಂದು ನಮೂದಿಸಿಲ್ಲ ಎಂದರೆ ನಮೂದಿಸಿದ್ದಾರೆ. ಚಾಸಾ–1 ರವರು

ನಿಪಿ.1 ರ ದೂರಿನಲ್ಲಿ ಹೇಳಿರುವ ವಿಷಯಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಿಪಿ–1ರ ದೂರಿನಲ್ಲಿ ಯಾವ ಕಾರಣಕ್ಕಾಗಿ ದ್ವೇಷ ಇದ್ದು ಹಲ್ಲೆ ಮಾಡಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ನಮೂದಿಸಿದ್ದಾರೆ. ಜಮೀನಿಗೆ ಮಣ್ಣು ತುಂಬಿರುವ ವಿಚಾರದಲ್ಲಿ ದ್ವೇಷ ಇತ್ತು ಎಂದು ನಮೂದಿಸಿದ್ದಾರೆ. ಸದರಿ ವಿಷಯ ನಿಪಿ–1ರ ದೂರಿನಲ್ಲಿ ಪ್ರಸ್ತಾಪವಾಗಿಲ್ಲ ಎಂದರೆ ಸರಿಯಲ್ಲ. ನಿಮ್ಮ ತನಿಖೆಯ ಸಮಯದಲ್ಲಿ ಮಣ್ಣು ತುಂಬಿರುವ ಜಮೀನು ಯಾವ ಗ್ರಾಮ ಮತ್ತು ಯಾವ ಸರ್ವೇ ನಂಬರ್ ಎಂದು ನಾನು ತನಿಖೆ ಮಾಡಿಲ್ಲ. ಸದರಿ ವಿಚಾರದಲ್ಲಿ ಗಲಾಟೆಯಾಗಿರದೇ ಇರುವ ಕಾರಣ ನಾನು ಆ ಬಗ್ಗೆ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಆ ದಿನ ಆ ಸ್ಥಳಕ್ಕೆ ಬಂದಿಲ್ಲ ಮತ್ತು ಚಾಸಾ–2 ರವರಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಪಹಣಿಯನ್ನು ನಾನು ಸಂಗ್ರಹಿಸಿಲ್ಲ. ಚಾಸಾ–1 ರವರ ತಂದೆಯ ಹೆಸರು ಹೊಳೆಗೌಡ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಲೇ ಬೇಕು ಎಂಬ ಕಾರಣದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.